

‘ಕನ್ನಡ’ ಎಂಬ ಪದಕ್ಕೆ ‘ಭ್ರಮೆ’ ಅಥವಾ ‘ಮಾಯೆ’ ಎಂಬ ಅರ್ಥ.

ಈ ನೆಲೆಯಲ್ಲಿ ಸರ್ವಜ್ಞನ ವಚನದ ‘ಕನ್ನಡದ ಒಳಗನಾರರಿಗು’ ಎಂಬ ಸಾಲಿನ ಅರ್ಥ – ‘ಮಾಯೆಯ ಒಳಗನ್ನು’, ಎಂದರೆ ಮಾಯೆಯ ಸ್ವರೂಪವನ್ನು ತಿಳಿದವರು ಯಾರು? ಎನ್ನುವುದು. ಅರ್ಥಾತ್ ಮಾಯೆಯ ಸ್ವರೂಪವನ್ನು ಯಾರಿಗೂ ತಿಳಿಯಲು ಸಾಧ್ಯವಿಲ್ಲ. ಈ ಸಾಲನ್ನು **‘Who knows the nature of illusion?’** ಎಂದು ಅನುವಾದಿಸಿದೆ. (ಈಗೇನಾದರೂ ನಾನು ಯಾವುದಾದರೂ ಒಂದು ಸಾರ್ವಜನಿಕ ಸಭೆಯಲ್ಲಿ ‘ಕನ್ನಡ’ ಎಂದರೆ ‘ಭ್ರಮೆ,’/ ‘ಮಾಯೆ’ ಎಂದು ವಿಚಾರ ಮಂಡಿಸಿದರೆ, ಮತ್ತೆ ಮನೆ ಮುಟ್ಟುವುದು ಕಷ್ಟ.)

ಪ್ರೊ. ವಿವೇಕ ರೈ ಮತ್ತು ನಾನು ಜೊತೆಯಾಗಿ ಮಧ್ಯಕಾಲೀನ ಕನ್ನಡ ಕಾವ್ಯದ ಆಯ್ದ ಭಾಗಗಳನ್ನು ಅನುವಾದಿಸಿ, ಅದರ ವಾಚಿಕೆಯೊಂದನ್ನು ಸಿದ್ಧಪಡಿಸುತ್ತಿದ್ದೇವೆ. ಈ ಕಾರ್ಯದಲ್ಲಿ ತೊಡಗಿಕೊಂಡಾಗ ಮೇಲೆ ಹೇಳಿದಂತಹ ಅನೇಕ ಹೊಸ ಅರ್ಥಗಳು, ರೋಚಕ ಒಳನೋಟಗಳು ನನಗೆ ದೊರಕಿದುವು. ಅವುಗಳಲ್ಲಿ ಇನ್ನೆರಡು ಒಳನೋಟಗಳನ್ನು ಓದುಗರೊಡನೆ ಹಂಚಿಕೊಳ್ಳುತ್ತಿದ್ದೇನೆ.

ವ್ಯಾಸತೀರ್ಥರ ಒಂದು ಕೀರ್ತನೆಯಲ್ಲಿ ಈ ಸಾಲುಗಳು ಬರುತ್ತವೆ: ನಖಗಳೆಂಬ ಸಂತತ ಪೂರ್ಣಚಂದ್ರನ್ನ / ಅಕಳಂಕ ನವ ಚಂದ್ರಿಕೆಯನ್ನು ಸವಿದು’. ಇಲ್ಲಿ ‘ನಖ’ ಏನು ಮಾಡುತ್ತಿದೆ? ನಖ ಎಂದರೆ ‘ಉಗುರು’; ಉಗುರಿನಿಂದ ಆಗುವ ಚಿಕ್ಕ ಗಾಯಕ್ಕೆ ‘ನಖಕ್ಷತ’ ಎಂಬ ಹೆಸರಿರುವುದು ಕಾಮಶಾಸ್ತ್ರವನ್ನು ಓದಿದ ಎಲ್ಲರಿಗೂ ಗೊತ್ತು. ಆದರೆ ಇಲ್ಲಿ ಬೆಳದಿಂಗಳಿಗೂ ‘ನಖ’ಕ್ಕೂ ಏನು ಸಂಬಂಧ? ಕಿಟ್ಟೆಲ್ ಕೋಶವೂ ಬೇರೆ ಅರ್ಥವನ್ನು ಕೊಡುವುದಿಲ್ಲ. ಕೊನೆಗೆ (ಎಂದಿನಂತೆ) ಈ ಸಮಸ್ಯೆಯನ್ನು ವಿವೇಕ ರೈ ಅವರಿಗೆ ದಾಟಿಸಿದೆ. ಅವರೂ ಸಾಕಷ್ಟು ಚಿಂತಿಸಿ, ಇತರ ವಿದ್ವಾಂಸರನ್ನು ಸಂಪರ್ಕಿಸಿ, ‘ನಖ’ ಎಂದರೆ ‘ಆಕಾಶವಿಲ್ಲದಿರುವುದು’ – ಯಾವ ಎಲ್ಲೆಯೂ ಇಲ್ಲದಿರುವುದು ಎಂದು ತಿಳಿಸಿದರು. ‘ಖ’ ಎಂದರೆ ಆಕಾಶ, ‘ನ ಖ’ ಎಂದರೆ ಆಕಾಶವಿಲ್ಲದಿರುವುದು; ವ್ಯಾಸತೀರ್ಥರು ಇಲ್ಲಿ, ‘ಆಕಾಶವನ್ನೂ ಮುಚ್ಚಿರುವ ಹಾಗೂ ಎಲ್ಲೆಡೆ ಪಸರಿಸಿರುವ ಬೆಳದಿಂಗಳು’ ಎಂದು ಹೇಳುತ್ತಿದ್ದಾರೆ.

ಇದೇ ಚಿಂತನೆಯನ್ನು ಮುಂದುವರೆಸಿದಾಗ, ಹರಿದಾಸರ ರಚನೆಗಳೆಲ್ಲವೂ ಒಂದೇ ಚೌಕಟ್ಟಿನಲ್ಲಿ ಸೇರುವುದಿಲ್ಲ ಎಂಬುದು ನಮ್ಮ ಅರಿವಿಗೆ ಬರುತ್ತದೆ. ಸಾಮಾನ್ಯವಾಗಿ, ‘ವ್ಯಾಸಕೂಟ’ದ ಕವಿಗಳು ರಚಿಸಿರುವ ಕೀರ್ತನೆಗಳು ಕಾಲದೇಶಗಳ ಸೀಮೆಯನ್ನು ದಾಟಿ ಮಾನವ ಸಹಜ ಮಿತಿಗಳನ್ನು, ದೌರ್ಬಲ್ಯಗಳನ್ನು ಸಂಸ್ಕೃತ ಭೂಯಿಷ್ಠ ಶೈಲಿಯಲ್ಲಿ ಚಿತ್ರಿಸುತ್ತವೆ; ಆದರೆ ‘ದಾಸಕೂಟ’ದ ಕವಿಗಳ ರಚನೆಗಳು ಸಾಂದರ್ಭಿಕ–ವೈಯಕ್ತಿಕ ನೋವು ಸಂಕಟಗಳನ್ನು ಆರ್ತವಾಗಿ, ಮೂರ್ತ ರೂಪದಲ್ಲಿ ಹಾಗೂ ಸರಳ ಶೈಲಿಯಲ್ಲಿ ಚಿತ್ರಿಸುತ್ತವೆ.

ಬಸವಣ್ಣನವರ ‘ಎನ್ನ ಕಾಯವ ದಂಡಿಗೆಯ ಮಾಡಯ್ಯಾ’ ಎಂಬ ಪ್ರಸಿದ್ಧ ವಚನ ಎಲ್ಲರಿಗೂ ಗೊತ್ತು. ಆದರೆ, ಆ ವಚನದಲ್ಲಿ ಬಸವಣ್ಣನವರು ಯಾವ ತಂತಿವಾದ್ಯವನ್ನು ವರ್ಣಿಸುತ್ತಾರೆ? ಸಾಮಾನ್ಯವಾಗಿ ನಾವು ಆ ವಾದ್ಯವನ್ನು ‘ವೀಣೆ’ ಎಂದು ಗ್ರಹಿಸುತ್ತೇವೆ. ತಮ್ಮ ಅನುವಾದದಲ್ಲಿ ರಾಮಾನುಜನ್ ಆ ವಾದ್ಯವನ್ನು **‘lute’** ಎಂದು ಕರೆಯುತ್ತಾರೆ; ಆದರೆ **‘lute’** ಪದವು ವೀಣೆಯಂತಹ ಎಲ್ಲಾ ತಂತಿವಾದ್ಯಗಳಿಗೂ ಅನ್ವಯಿಸುತ್ತದೆ. ಓ.ಎಲ್. ನಾಗಭೂಷಣಸ್ವಾಮಿ ಅವರು ತಮ್ಮ ಅನುವಾದದಲ್ಲಿ ವಾದ್ಯದ ಹೆಸರನ್ನು ಕೊಡುವುದಿಲ್ಲ. (ಮೂಲ ವಚನದಲ್ಲಿಯೂ ವಾದ್ಯದ ಹೆಸರಿಲ್ಲ.) ಆದರೆ ಅದು ‘ವೀಣೆ’ಯಲ್ಲ; ಕಾರಣ ವೀಣೆಯು ಬೆರಳುಗಳಿಂದ ತಂತಿಗಳನ್ನು ಮಿಡಿಯುವ ವಾದ್ಯ. ಬಸವಣ್ಣನವರು ಎನ್ನ ಬೆರಳ ಕಡ್ಡಿಯ ಮಾಡಯ್ಯಾ ಎನ್ನುವಾಗ ತಂತಿಗಳನ್ನು ಮಿಡಿಯುವುದು ಬೆರಳಲ್ಲ ಮತ್ತೇನೋ ವಸ್ತು ಎಂದು ಗೊತ್ತಾಗುತ್ತದೆ. ಬಸವಣ್ಣನವರ ಕಾಲಕ್ಕೆ (ಎಂದರೆ 12ನೆಯ ಶತಮಾನದಲ್ಲಿ) ಸಿತಾರ್, ಸಾರೋದ್, ಮ್ಯಾಂಡೊಲಿನ್, ಇತ್ಯಾದಿ ಇನ್ನೂ ಭಾರತಕ್ಕೆ ಬಂದಿರಲಿಲ್ಲ. ಮತ್ತೆ ಯಾವುದು? ಅಂತರ್ಜಾಲದಲ್ಲಿ 12ನೇ ಶತಮಾನದ ಭಾರತೀಯ ತಂತಿವಾದ್ಯಗಳ ಚಿತ್ರಗಳನ್ನು ಹಾಗೂ ವಿವರಗಳನ್ನು ನೋಡಿದಾಗ, ಕೊನೆಗೆ, ಅದು ಭಾರತದ ಅತ್ಯಂತ ಪುರಾತನ ವಾದ್ಯವಾದ ‘ಗೋಟು ವಾದ್ಯ’ ಇರಬಹುದು ಎಂದು ಗೊತ್ತಾಯಿತು. ಅದರ ತಂತಿಗಳನ್ನು ಚಪ್ಪಟೆಯಾದ ದಂತದ ಅಥವಾ ನಯವಾದ ಮರದ ತುಂಡಿನಿಂದ **(slide)** ಮೀಟುತ್ತಾರೆ. (ಇಂದು ಅದನ್ನು ‘ವಿಚಿತ್ರ ವೀಣೆ’ ಎಂದು ಕರೆಯುತ್ತಾರೆ.)

ಬಸವಣ್ಣನವರ ಅದೇ ವಚನದಲ್ಲಿ ‘ಬತ್ತೀಸ ರಾಗಗಳ’ ಎಂಬ ಪದಗಳು ಬರುತ್ತವೆ. ಬತ್ತೀಸ್ ಎಂದರೆ 32. ಹೆಸರೇ ಹೇಳುವಂತೆ ಅದು ಹಿಂದಿಯಿಂದ ಅಥವಾ ಉರ್ದುವಿನಿಂದ ಬಂದಿರಬಹುದಾದ ಶಬ್ದ. ಈ ಬತ್ತೀಸ್ ರಾಗಗಳು ಯಾವುವು? ಪುರಂದರ ದಾಸರ ಕೆಲವು ಕೀರ್ತನೆಗಳಲ್ಲಿ ಅವುಗಳ ಹೆಸರುಗಳು ಬರುತ್ತವೆ (‘ತುತ್ತುರು ತೂರೆಂದು’, ‘ನಳಿನಜಾಂಡ ತಲೆಯ ತೂರಿ,’ ‘ರಂಗ ಕೊಳಲನೂದಲಾಗಿ,’ ಇತ್ಯಾದಿ ರಚನೆಗಳಲ್ಲಿ). ಕುತೂಹಲದ ಸಂಗತಿಯೆಂದರೆ, ಈ 32 ರಾಗಗಳಲ್ಲಿ ಕೆಲವನ್ನು ಇಂದು ನಾವು ಹಿಂದೂಸ್ತಾನಿ ಶೈಲಿಯ ಸಂಗೀತದಲ್ಲಿ, ಮತ್ತೆ ಕೆಲವು ರಾಗಗಳನ್ನು ಕರ್ನಾಟಕ ಶೈಲಿಯ ಸಂಗೀತದಲ್ಲಿ ಗುರುತಿಸುತ್ತೇವೆ. ಎಂದರೆ, 16ನೆಯ ಶತಮಾನದವರೆಗೂ ಭಾರತದಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ಹಿಂದುಸ್ತಾನಿ ಮತ್ತು ದಕ್ಷಿಣಾದಿ ಎಂಬ ಭಿನ್ನ ಶೈಲಿಗಳಿರಲಿಲ್ಲ; ಆ ವರ್ಗೀಕರಣ ನಂತರ, ಪ್ರಾಯಶಃ 18ನೆಯ ಶತಮಾನದಲ್ಲಿ ಪ್ರಾರಂಭವಾಯಿತು ಎಂದು ನಾವು ಊಹಿಸಬಹುದು. ಇನ್ನು, ದಕ್ಷಿಣಾದಿ ಪರಂಪರೆಯಲ್ಲಿ 72 ಮೇಳಕರ್ತ ರಾಗಗಳು, ಅವುಗಳಿಂದ ಜನ್ಯ ರಾಗಗಳು ಎಂಬ ವರ್ಗೀಕರಣ 19ನೆಯ ಶತಮಾನದಲ್ಲಿ ಆಗಿರಬಹುದು.

ಪ್ರತಿಯೊಂದು ಓದುವಿಕೆಯೂ ಪ್ರತಿಯೊಂದು ಬರವಣಿಗೆಯೂ ಕಲಿಕೆಯ ಪ್ರಕ್ರಿಯೆ. ಹಳೆಯದನ್ನು ಮರೆಯುವ, ಹೊಸದನ್ನು ತಿಳಿಯುವ ಪ್ರಕ್ರಿಯೆ. ಈ ಬಗೆಯ ಕಲಿಕೆಗೆ ಕೊನೆಯಿಲ್ಲ, ಕೊನೆಯಿರಬಾರದು. ■